

# ಕಿಳಿಂಗಾರು ಕಣಿವೆಯಿಂದೆದ್ದು ನಡೆದ ಬಯಲ ಬೆಟ್ಟ

## ತಿರುಮಲೇಶರ ಒಡನಾಟದ ಕೆಲವು ನೆನಪುಗಳು



**ಅನುಪಮಾ ಪ್ರಸಾದ್**

ಬೆಳಗಿನ ತಿಂಡಿ ತಯಾರಿಯಲ್ಲಿದ್ದಾಗ ತಿರುಮಲೇಶರು ಇನ್ನಿಲ್ಲವೆಂಬ ಸುದ್ದಿ. ಒಂದು ಕ್ಷಣ ಹೇಗೆ ಈ ಸುದ್ದಿಯನ್ನು ಎದುರಾಗಬೇಕೆಂದರಿವಾಗಲಿಲ್ಲ. ಇದು ಸುಳ್ಸುದ್ದಿ ಅಂದುಕೊಳ್ಳುವಷ್ಟರಲ್ಲಿ ಮೊಬೈಲ್ ಕರೆ. ಸ್ವೀಕರಿಸುತ್ತಿದ್ದಂತೆ ಮತ್ತೊಂದು ಕರೆಯ ಪ್ರಯತ್ನ. ಸುದ್ದಿ ಪಕ್ಕಾ ಎಂಬುದಂತು ನಿಜ. ಆದರೆ, ಕರೆ ಮಾಡಿದವರ ಪ್ರಾರ್ಥನೆಯೂ ಇದು ತಪ್ಪು ಸುದ್ದಿ ಇರಲಿ ಎಂಬುದೇ ಆಗಿತ್ತು.

ತಿರುಮಲೇಶರು ಕೊನೆಯ ಬಾರಿ ದೂರವಾಣಿ ಕರೆ ಮಾಡಿದಾಗ 'ಹಲೋ' ಅಂದ ಧ್ವನಿ ಕೇಳಿ ವಿಪರೀತ ನಿತ್ರಾಣರಾಗಿದ್ದಾರೆ ಅನಿಸಿತ್ತು. ಆಗಷ್ಟೆ ಹಾರ್ಟ್ ಅಟ್ಯಾಕ್ ಹೊಡೆತದಿಂದ ಚೇತರಿಸಿಕೊಳ್ಳುತ್ತಿದ್ದರು. 'ನಿಂಗ ಎಲ್ಲ ಹೇಂಗಿದ್ದಿ? ಆನೀಗ ಹುಷಾರಿಲೆ' ಅಂದುಬಿಟ್ಟಿದ್ದರು. ಮಾತಿನ ನಡುವೆ ಊರಕತೆ. 'ವ್ಯಾಸನ ನೆನಪಾವುತ್ತು' ಅಂದರು. (ನಾವು ಹವಿಗನ್ನಡದಲ್ಲಿ ಮಾತಾಡುತ್ತಿದ್ದುದರಿಂದ ಬೇಕೇ ಬೇಕು ಅನಿಸಿದಲ್ಲಿ ಅದೇ ನುಡಿ ಉಳಿಸಿಕೊಂಡಿರುವೆ.) ಅವರ ಮಾತಿನ ಲಯ ಮೊದಲಿಗಿಂತ ವೇಗವಿದೆ ಎಂಬ ಅನುಭವವಾಗುತ್ತಿತ್ತು. ಅದನ್ನೇ ಹೇಳಿದೆ. 'ಎಂತೊ. ಗೊಂತಾವುತ್ತಿಲ್ಲೆ. ಆನು ಆನಲ್ಲ ಹೇಳಿ ಆವುತ್ತು. ಒಂದು ನಮೂನೆ ಕ್ರೈಸಿಸಲ್ಲಿದ್ದೆ ಹೇಳಿ ಅನ್ಸುತ್ತು ಅನುಪಮ' ಅಂದರು. ಪ್ರಸಾದ್ ಜೊತೆ ಮಾತಾಡಿದರು. ಔಷಧಗಳ ಕಾರಣದಿಂದ ಕಳೆದುಕೊಂಡ ಬಾಯಿರುಚಿ ಬಗ್ಗೆ, ಇತರ ಸಮಸ್ಯೆಗಳ ಬಗ್ಗೆ, ಆಹಾರ ಬೇಡ ಅನಿಸುವ ಬಗ್ಗೆ ಹೇಳಿದರು. ಮಗನ ಬಗ್ಗೆ ವಿಚಾರಿಸಿದರು. ಪ್ರತಿ ಮಾತುಕತೆಯಲ್ಲೂ ಮಗನ ಬಗ್ಗೆ ವಿಚಾರಿಸುತ್ತಿದ್ದರು.